Naukri Messenger
Your dream jobs here

ನೋಂದಣಿ ಸಂಖ್ಯೆ

# ಪರೀಕ್ಷೆ : 3 – 2022

## ಪತ್ರಿಕೆ ಸಂಕೇತ : 1A

## ವಿಷಯ ಸಂಕೇತ : P1-GS

ಪತ್ರಿಕೆ – 1 – ಪ್ರಶ್ನೆ ಪತ್ರಿಕೆ ಪುಸ್ತಿಕೆ

ಪ್ರಶ್ನೆ ಪತ್ರಿಕೆ ಕ್ರಮ ಸಂಖ್ಯೆ 1035171

# ವಿಷಯ : ಸಾಮಾನ್ಯ ಅಧ್ಯಯನ

ಗರಿಷ್ಠ ಅಂಕಗಳು : 150

ಗರಿಷ್ಠ ಅವಧಿ : 2.30 ಗಂಟೆಗಳು ಪರೀಕ್ಷಾ ಅವಧಿ : 10.00 A.M. to 12.30 P.M.

## ಅಭ್ಯರ್ಥಿಗಳಿಗೆ ಸೂಚನೆಗಳು

(ನೀಡಲಾಗಿರುವ ಸೂಚನೆಗಳನ್ನು ಜಾಗರೂಕತೆಯಿಂದ ಓದಿ)

1. ನಿಮಗೆ ನೀಡಿರುವ ಸೀಲ್ ಮಾಡಿರುವ ಪಾಲಿಥಿನ್ ಕವರ್ ಓ.ಎಂ.ಆರ್. ಉತ್ತರ ಪತ್ರಿಕೆ ಮತ್ತು ಪ್ರಶ್ನೆ ಪತ್ರಿಕೆ ಪುಸ್ತಿಕೆಯನ್ನೊಳಗೊಂಡಿದೆ, ಮೊದಲು ಜಾಗರೂಕತೆಯಿಂದ ಓ.ಎಂ.ಆರ್. ಉತ್ತರ ಹಾಳೆಯನ್ನು ಹೊರತೆಗೆಯಿರಿ. ಓ.ಎಂ.ಆರ್. ಉತ್ತರ ಹಾಳೆಯ ಮೇಲ್ಭಾಗದಲ್ಲಿ ಅಭ್ಯರ್ಥಿಯ ವೈಯಕ್ತಿಕ ಮಾಹಿತಿಯು ಪೂರ್ವಮುದ್ರಿತಗೊಂಡಿದೆ. ಸದರಿ ಪೂರ್ವಮುದ್ರಿತ ಮಾಹಿತಿಯು ತಮ್ಮದೇ ಎಂದು ಖಚಿತಪಡಿಸಿಕೊಳ್ಳುವುದು. ಇಲ್ಲವಾದಲ್ಲಿ ನಿಮ್ಮ ಉತ್ತರ ಪತ್ರಿಕೆಯನ್ನು ಮೌಲ್ಯಮಾಪನಕ್ಕೆ ಒಳಪಡಿಸುವುದಿಲ್ಲ.
2. 150 ಬಹು ಆಯ್ಕೆ ಪ್ರಶ್ನೆಗಳನ್ನು ಒಳಗೊಂಡ ಮೊಹರಾದ ಪ್ರಶ್ನೆಪತ್ರಿಕೆ ಪುಸ್ತಿಕೆಯನ್ನು ನಿಮಗೆ ನೀಡಲಾಗಿದೆ.
3. ಪ್ರಶ್ನೆಗಳು ಕನ್ನಡ, ಆಂಗ್ಲ, ಉರ್ದು, ತಮಿಳು, ತೆಲುಗು ಮತ್ತು ಮರಾಠಿ ಮಾಧ್ಯಮಗಳಲ್ಲಿ ಮುದ್ರಿತವಾಗಿವೆ. ಒಂದು ವೇಳೆ ಪ್ರಶ್ನೆಪತ್ರಿಕೆಯಲ್ಲಿ ವ್ಯತ್ಯಾಸ/ಸಂದೇಹವಿದ್ದಲ್ಲಿ, ಆಂಗ್ಲ ಮಾಧ್ಯಮದಲ್ಲಿರುವ ಪ್ರಶ್ನೆಗಳನ್ನು ಅಂತಿಮವೆಂದು ಪರಿಗಣಿಸಲಾಗುವುದು.
4. ಅಭ್ಯರ್ಥಿಗಳು ಮತ್ತು ಕೊಠಡಿ ಮೇಲ್ವಿಚಾರಕರು ಓ.ಎಂ.ಆರ್. ಉತ್ತರ ಹಾಳೆಯಲ್ಲಿ ನಿಗದಿಪಡಿಸಿದ ಜಾಗದಲ್ಲಿ ಸಹಿ ಮಾಡುವುದು. ಅಭ್ಯರ್ಥಿಯು ತನ್ನ ಎಡಗೈ ಹೆಬ್ಬೆರಳಿನ ಮುದ್ರೆಯನ್ನು ನಿಗದಿಪಡಿಸಿದ ಜಾಗದಲ್ಲಿ ಕಡ್ಡಾಯವಾಗಿ ಹಾಕುವುದು. ಅಭ್ಯರ್ಥಿಯ ಸಹಿ ಮತ್ತು ಹೆಬ್ಬೆರಳಿನ ಮುದ್ರೆ ಇಲ್ಲದಿದ್ದಲ್ಲಿ ಅಂತಹ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ್ಲ.
5. ಓ.ಎಂ.ಆರ್. ಉತ್ತರ ಹಾಳೆಯಲ್ಲಿ ಸರಿಪಡಿಸುವ ಪೆನ್ನಿನ (ವೈಟ್ನರ್) ಬಳಕೆ ಮಾಡಲು/ತಿದ್ದುಪಡಿಗಳಿಗೆ ಅನುಮತಿ ಇರುವುದಿಲ್ಲ ಹಾಗೂ ಅಂತಹ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ್ಲ.
6. ಕಚ್ಚಾ ಕಾರ್ಯವನ್ನು (Rough work) ಪ್ರಶ್ನೆಪತ್ರಿಕೆ ಪುಸ್ತಿಕೆಯಲ್ಲಿ ಒದಗಿಸಿರುವ ಖಾಲಿ ಸ್ಥಳದಲ್ಲಿ ಮಾತ್ರ ಮಾಡತಕ್ಕದ್ದು. ಕಚ್ಚಾ ಕಾರ್ಯವನ್ನು ಯಾವುದೇ ಕಾರಣಕ್ಕೂ ಓ.ಎಂ.ಆರ್. ಉತ್ತರ ಹಾಳೆಯ ಮೇಲೆ ಮಾಡತಕ್ಕದ್ದಲ್ಲ.
7. ಪ್ರತಿ ಪ್ರಶ್ನೆಯನ್ನು ಜಾಗರೂಕತೆಯಿಂದ ಓದುವುದು. ಪ್ರತಿ ಪ್ರಶ್ನೆಯ ಕೆಳಗೆ ಕೊಟ್ಟಿರುವ ನಾಲ್ಕು ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ. ಓ.ಎಂ.ಆರ್. ಉತ್ತರ ಹಾಳೆಯಲ್ಲಿನ ಪ್ರಶ್ನೆ ಸಂಖ್ಯೆಗೆ ಎದುರಾಗಿ ಸೂಕ್ತ ವೃತ್ತವನ್ನು ಸಂಪೂರ್ಣವಾಗಿ ಶೇಡ್ ಮಾಡುವುದು. ಉದಾಹರಣೆಗೆ ಪ್ರಶ್ನೆಪತ್ರಿಕೆಯಲ್ಲಿನ ಪ್ರಶ್ನೆ ಸಂಖ್ಯೆ 20ಕ್ಕೆ '3' ಸರಿಯಾದ ಉತ್ತರವಾಗಿದ್ದಲ್ಲಿ, ಓ.ಎಂ.ಆರ್. ಉತ್ತರ ಹಾಳೆಯಲ್ಲಿ '3' ನೇ ವೃತ್ತವನ್ನು ನೀಲಿ/ಕಪ್ಪು ಶಾಹಿಯ ಬಾಲ್ ಪಾಯಿಂಟ್ ಪೆನ್ನನ್ನು ಉಪಯೋಗಿಸಿ ಕೆಳಕಂಡಂತೆ ಶೇಡಿಂಗ್ ಮಾಡುವುದು.

   20. ① ② ● ④

8. ಕೊಟ್ಟಿರುವ ಪ್ರಶ್ನೆಗೆ ಒಂದಕ್ಕಿಂತ ಹೆಚ್ಚು ವೃತ್ತಕ್ಕೆ ಶೇಡಿಂಗ್ ಮಾಡಿದ್ದಲ್ಲಿ, ಅಂತಹ ಉತ್ತರಗಳನ್ನು ತಪ್ಪು ಎಂದು ಪರಿಗಣಿಸಿ ಯಾವುದೇ ಅಂಕಗಳನ್ನು ನೀಡುವುದಿಲ್ಲ. ಓ.ಎಂ.ಆರ್. ಉತ್ತರ ಹಾಳೆಯಲ್ಲಿನ ಉದಾಹರಣೆಯನ್ನು ಗಮನಿಸಿ.
9. ಪರೀಕ್ಷಾ ಕೊಠಡಿಯೊಳಗೆ ಕ್ಯಾಲ್ಕುಲೇಟರ್, ಮೊಬೈಲ್ ಫೋನ್ ಹಾಗೂ ಇನ್ನಿತರೆ ವಿದ್ಯುನ್ಮಾನ ಪರಿಕರಗಳನ್ನು ತೆಗೆದುಕೊಂಡು ಹೋಗಲು ಅವಕಾಶವಿರುವುದಿಲ್ಲ.
10. ಅಭ್ಯರ್ಥಿಗಳಿಗೆ ಮೂಲ ಓ.ಎಂ.ಆರ್. ಉತ್ತರ ಹಾಳೆಯೊಂದಿಗೆ ಕಾರ್ಬನ್ ರಹಿತ ಓ.ಎಂ.ಆರ್. ಉತ್ತರ ಹಾಳೆಯನ್ನೂ ನೀಡಲಾಗಿದೆ. ಪರೀಕ್ಷೆಯ ಬಳಿಕ ಅಭ್ಯರ್ಥಿಯು ಮೂಲ ಓ.ಎಂ.ಆರ್. ಉತ್ತರ ಹಾಳೆಯನ್ನು ಕೊಠಡಿ ಮೇಲ್ವಿಚಾರಕರಿಗೆ ಹಿಂದಿರುಗಿಸತಕ್ಕದ್ದು ಹಾಗೂ ಕಾರ್ಬನ್‌ರಹಿತ ಪ್ರತಿಯನ್ನು ಅಭ್ಯರ್ಥಿಯೇ ಇಟ್ಟುಕೊಳ್ಳುವುದು. ಒಂದು ವೇಳೆ ಓ.ಎಂ.ಆರ್.ನ ಮೂಲ ಪ್ರತಿಯನ್ನು ಕೊಠಡಿ ಮೇಲ್ವಿಚಾರಕರಿಗೆ ಹಿಂದಿರುಗಿಸದಿದ್ದಲ್ಲಿ, ಅಂತಹ ಅಭ್ಯರ್ಥಿಗಳ ಅಭ್ಯರ್ಥಿತನವನ್ನು ರದ್ದುಗೊಳಿಸಲಾಗುವುದು.
11. ಪರೀಕ್ಷಾ ಸಮಯದಲ್ಲಿ ಅಭ್ಯರ್ಥಿಯು ಪರೀಕ್ಷಾ ಅವ್ಯವಹಾರ ಮಾಡುವುದು ಕಂಡುಬಂದಲ್ಲಿ ಅಂತಹ ಅಭ್ಯರ್ಥಿಗಳನ್ನು ನೇಮಕಾತಿಗೆ ಪರಿಗಣಿಸಲಾಗುವುದಿಲ್ಲ ಹಾಗೂ ಅಂತಹವರ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು.

## ಓ.ಎಂ.ಆರ್. ಹಾಳೆಯನ್ನು ಭರ್ತಿ ಮಾಡಲು ಸೂಚನೆಗಳು

1. ಪ್ರತಿ ಪ್ರಶ್ನೆಗೂ ಒಂದೇ ಒಂದು ಸರಿಯಾದ ಉತ್ತರವಿರುತ್ತದೆ.
2. ವೃತ್ತವನ್ನು ನೀಲಿ ಅಥವಾ ಕಪ್ಪು ಬಾಲ್ ಪಾಯಿಂಟ್ ಪೆನ್ನಿನಿಂದ ಮಾತ್ರ ಶೇಡ್ ಮಾಡತಕ್ಕದ್ದು. ಉತ್ತರ ಮಾರ್ಪಡಿಸಲು ಪ್ರಯತ್ನಿಸಬಾರದು.
3. ವೃತ್ತದಲ್ಲಿರುವ ಸಂಖ್ಯೆ ಕಾಣದಂತೆ ವೃತ್ತವನ್ನು ಸಂಪೂರ್ಣವಾಗಿ ಶೇಡ್ ಮಾಡುವುದು.
4. ಓ.ಎಂ.ಆರ್. ಉತ್ತರ ಹಾಳೆಯ ಮೇಲೆ ಯಾವುದೇ ರೀತಿಯ ಗುರುತು, ಗೀಟು, ಚುಕ್ಕೆ ಅಥವಾ ಕಲೆಯನ್ನು ಮಾಡಬಾರದು.
5. ಇದು ಕಾರ್ಬನ್‌ರಹಿತ ಉತ್ತರ ಹಾಳೆಯಾಗಿದ್ದು, ಎರಡನೇ ಪ್ರತಿಯನ್ನು ಪ್ರತ್ಯೇಕವಾಗಿ ಶೇಡ್ ಮಾಡುವ ಅಗತ್ಯ ಇರುವುದಿಲ್ಲ.

SEAL



Naukri Messenger
Your dream jobs here
Scanned with CamScanner

## ಸಾಮಾನ್ಯ ಕನ್ನಡ

1. ಇವು ಅನುನಾಸಿಕ ಅಕ್ಷರಗಳು

(1) ಆ, ಈ, ಊ, ಏ
(2) ಖ, ಠ, ಢ, ಥ
(3) ಙ, ಞ, ಣ, ನ
(4) ಯ, ರ, ಲ, ವ

2. ರೂಢನಾಮಕ್ಕೆ ಉದಾಹರಣೆಯಾದ ಪದವಿದು

(1) ಮನುಷ್ಯ
(2) ಕಾವೇರಿ
(3) ವ್ಯಾಪಾರಿ
(4) ಹೊಸದು

3. ಅಷ್ಟು, ಇಷ್ಟು, ಹಲವು – ಪದಗಳು ಈ ವ್ಯಾಕರಣಾಂಶವಾಗಿವೆ

(1) ಗುಣವಾಚಕ
(2) ಪರಿಮಾಣವಾಚಕ
(3) ಸಂಖ್ಯೇಯ ವಾಚಕ
(4) ಭಾವನಾಮ

4. 'ಹೊಳೆಯಿಂದ' ಈ ಪದದಲ್ಲಿರುವ ವಿಭಕ್ತಿ

(1) ಪ್ರಥಮಾ
(2) ಷಷ್ಠೀ
(3) ಚತುರ್ಥೀ
(4) ತೃತೀಯಾ

5. ಆದೇಶ ಸಂಧಿಗೆ ಉದಾಹರಣೆಯಾದ ಪದವಿದು

(1) ಮೈದೋರು
(2) ಮಹಾತ್ಮ
(3) ಅಜಂತ
(4) ತನ್ಮಯ

6. 'ಬೆಟ್ಟದಾವರೆ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ

(1) ಕ್ರಿಯಾ ಸಮಾಸ
(2) ಗಮಕ ಸಮಾಸ
(3) ದ್ವಿಗು ಸಮಾಸ
(4) ತತ್ಪುರುಷ ಸಮಾಸ

7. 'ಬಟ್ಟಬಯಲು' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ

(1) ಜೋಡುನುಡಿ
(2) ದ್ವಿರುಕ್ತಿ
(3) ಅನುಕರಣಾವ್ಯಯ
(4) ಭಾವಸೂಚಕಾವ್ಯಯ

8. ಜೋಡುನುಡಿಗೆ ಉದಾಹರಣೆಯಾದ ಪದವಿದು

(1) ಕೊನೆಕೊನೆಗೆ
(2) ಚುರುಚುರು
(3) ಹಾಲ್ಜೇನು
(4) ಅಬ್ಬಬ್ಬಾ



Naukri Messenger
Your dream jobs here

Scanned with CamScanner

9. 'ಕಗ್ಗಂಟು' ಈ ನುಡಿಗಟ್ಟಿನ ಅರ್ಥ

(1) ಹತೋಟಿಯಲ್ಲಿಡು
(2) ಬಗೆಹರಿಸಲಾಗದ ಸಮಸ್ಯೆ
(3) ಸಿದ್ಧನಾಗು
(4) ಸುಳ್ಳುಮಾತು

10. ಸಾಮಾನ್ಯಾರ್ಥಕಾವ್ಯಯಕ್ಕೆ ಉದಾಹರಣೆಯಾದ ಪದವಿದು

(1) ಸೊಗಸಾಗಿ
(2) ಕರಕರ
(3) ಭಳಿರೆ !
(4) ಅವನೇ

11. 'ವೈಶಾಖ' ಪದದ ತದ್ಭವ ರೂಪ

(1) ಬೆಸುಗೆ
(2) ಬೇತಾಳ
(3) ಬೇಹಾರ
(4) ಬೇಸಗೆ

12. ಮಹಾಶಕ್ತನಾದ ದೇವರು ಸಮಸ್ತ ಲೋಕಗಳನ್ನು ಪ್ರೀತಿಯಿಂದ ಕಾಪಾಡುವನು. – ಈ ವಾಕ್ಯದಲ್ಲಿ ಕರ್ತೃ ಪದ

(1) ಸಮಸ್ತ ಲೋಕಗಳನ್ನು
(2) ಪ್ರೀತಿಯಿಂದ
(3) ದೇವರು
(4) ಕಾಪಾಡುವನು

13. 'ಭತ್ತ' ಎಂಬ ಅರ್ಥವನ್ನು ನೀಡುವ ಪದವಿದು

(1) ನರೆದಲೆಗ
(2) ಕಳವೆ
(3) ಹಾರಕ
(4) ನವಣೆ

14. 'ಜ್ಞಾನಿ' ಪದದ ವಿರುದ್ಧಾರ್ಥಕ ಪದ

(1) ಸುಜ್ಞಾನಿ
(2) ಧ್ಯಾನ
(3) ವಿಜ್ಞಾನಿ
(4) ಅಜ್ಞಾನಿ

15. ಮರಣಹೊಂದು, ಪರಿಶುದ್ಧತೆ, ಪಾತಿ – ಈ ಅರ್ಥಗಳನ್ನು ಹೊಂದಿರುವ ಪದವಿದು

(1) ಮಡಿ
(2) ಕಾಡು
(3) ಬೇಡ
(4) ಹರಿ

16. ವಿವೇಕ ಶಾಲೆಗೆ ಹೋಗುತ್ತಾನೆ – ಈ ವಾಕ್ಯದಲ್ಲಿ ಗೆರೆ ಎಳೆದಿರುವ ಪದದಲ್ಲಿರುವ ಕಾಲಸೂಚಕ ಪ್ರತ್ಯಯ

(1) ವ
(2) ಉವ
(3) ಉತ್ತ
(4) ದ





Naukri Messenger
Your dream jobs here

Scanned with CamScanner

17. ನಾನು ಸದಾಕಾಲ ಒಳ್ಳೆಯ ಯೋಚನೆ ಮಾಡುವೆ – ಈ ವಾಕ್ಯದಲ್ಲಿ 'ಮಾಡುವೆ' ಪದದಲ್ಲಿರುವ ಕ್ರಿಯಾರೂಪ
(1) ಪ್ರಶ್ನಾರ್ಥಕ
(2) ವಿಧ್ಯರ್ಥಕ
(3) ಸಂಭಾವನಾರ್ಥಕ
(4) ನಿಷೇಧಾರ್ಥಕ

18. ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತೋರಿಸುವ ಸಂದರ್ಭದಲ್ಲಿ ಈ ಲೇಖನ ಚಿಹ್ನೆಯನ್ನು ಬಳಸಲಾಗುತ್ತದೆ
(1) ಉದ್ಧರಣ ಚಿಹ್ನೆ
(2) ವಾಕ್ಯವೇಷ್ಟನ ಚಿಹ್ನೆ
(3) ಆವರಣ ಚಿಹ್ನೆ
(4) ವಿವರಣಾತ್ಮಕ ಚಿಹ್ನೆ

19. 'ಬರ್‍ತಾನೆ' ಈ ಪದದ ಗ್ರಾಂಥಿಕ ರೂಪ
(1) ಬಂದನು
(2) ಬರುವುದಿಲ್ಲ
(3) ಬರುತ್ತಾನೆ
(4) ಬಂದಿದ್ದಾನೆ

20. ಸರಿಯಾದ ಪದರೂಪವಿದು
(1) ಅನಿರ್ವಚನೀಯ
(2) ಅನೀರ್ವಚನಿಯ
(3) ಅನಿರ್ವಚನಿಯ
(4) ಅನಿರ್ವಛನಿಯ

21. 'ಅಣ್ಣ' ಪದದ ಬಹುವಚನ ರೂಪವಿದು
(1) ಅಣ್ಣರು
(2) ಅಣ್ಣವು
(3) ಅಣ್ಣಗಳು
(4) ಅಣ್ಣಂದಿರು

22. 'ಮಾಲೆಯ' – ಈ ಪದವು ಅಕ್ಷರ ಗಣಗಳಲ್ಲಿ ಇದಾಗಿದೆ
(1) 'ತ' ಗಣ
(2) 'ಭ' ಗಣ
(3) 'ಸ' ಗಣ
(4) 'ಯ' ಗಣ

23. ನೀಚರಿಗೆ ಮಾಡಿದ ಉಪಕಾರವು ಹಾವಿಗೆ ಹಾಲೆರೆದಂತೆ. – ಈ ವಾಕ್ಯದಲ್ಲಿರುವ ಅಲಂಕಾರ
(1) ರೂಪಕಾಲಂಕಾರ
(2) ದೃಷ್ಟಾಂತಾಲಂಕಾರ
(3) ಉಪಮಾಲಂಕಾರ
(4) ಶ್ಲೇಷಾಲಂಕಾರ

24. 'ಷಟ್ಪದಿ ಬ್ರಹ್ಮ' ಅಭಿದಾನವನ್ನು ಹೊಂದಿರುವ ಕವಿ
(1) ಜನ್ನ
(2) ರಾಘವಾಂಕ
(3) ಕುಮಾರವ್ಯಾಸ
(4) ಲಕ್ಷ್ಮೀಶ

25. ತಾಳಿದವನು ಬಾಳಿಯಾನು – ಈ ಗಾದೆಯು ಇದರ ಮಹತ್ವವನ್ನು ತಿಳಿಸುತ್ತದೆ
(1) ವಿದ್ಯೆಯ
(2) ಶ್ರಮದ
(3) ಸಮಯದ
(4) ತಾಳ್ಮೆಯ



Naukri Messenger
Your dream jobs here
Scanned with CamScanner

## GENERAL ENGLISH

26. Sunitha is regular to the class, but Sushma is ______.
Choose the appropriate prefix for the word underlined to make it opposite.
(1) dis (2) il (3) ir (4) in

27. The President appointed him.
Here the underlined word is a/an
(1) collective noun (2) common noun
(3) proper noun (4) abstract noun

28. Hamlet is ________ greatest play of Shakespeare.
Choose an article and fill in the blank.
(1) a (2) an (3) for (4) the

29. Hema is a dancer, ________.
Choose the appropriate question tag.
(1) isn't she ? (2) is she ? (3) wasn't she ? (4) was she ?

30. When was R. K. Laxman born ?
Identify the type of sentence from the given alternatives.
(1) Assertive sentence (2) Interrogative sentence
(3) Exclamatory sentence (4) Imperative sentence

31. The Indian Ambassador visited the Western countries.
Choose the appropriate question so as to get the underlined words as answer.
(1) When did the Indian Ambassador visit the Western countries ?
(2) Who visited the Western countries ?
(3) Why did the Indian Ambassador visit the Western countries ?
(4) How did the Indian Ambassador visit the Western countries ?

32. Choose the odd one out.
(1) Coach (2) Teacher (3) Learner (4) Trainer

33. You and I are studying in the same class. _______ are classmates.
Choose the appropriate pronoun from the given alternatives.
(1) They (2) You (3) I (4) We

34. Mahatma Gandhiji/weapon/as his/non-violence/adopted/during freedom struggle.
A B C D E F
Rearrange the words to form a meaningful sentence.
(1) A E C D B F - Mahatma G. adopted as his non violence weapon during
(2) A E D C B F - nonviolence as his weapon
(3) A D E C B F
(4) B A C D E F



Naukri Messenger
Your dream jobs here

Scanned with CamScanner

35. Choose the right dictionary order of the words.
(1) bother, brother, burglar, blossom
(2) blossom, brother, bother, burglar
(3) blossom, bother, brother, burglar
(4) brother, bother, blossom, burglar

36. She is beautiful __________ poor.
Choose the most appropriate word to complete the sentence.
(1) but (2) as (3) or (4) so

37. Suma ________ temple every Thursday.
Choose the correct verb form and fill in the blank.
(1) visit (2) visits (3) visited (4) visiting

38. He walked ________ the theatre.
Choose the suitable preposition and fill in the blank.
(1) in (2) on (3) into (4) over

39. It is very cold outside. Sit by the fire and _________.
Choose the correct phrasal verb and fill in the blank.
(1) warm in (2) warm up (3) warm out (4) warm from

40. Identify the word with the correct spelling.
(1) Mystery (2) Mystary (3) Mystry (4) Mistry

41. His job hunt had proved fruitless. Now he is <u>treading water</u>.
Choose the appropriate meaning of the idiom underlined.
(1) bringing water
(2) playing in water
(3) making no progress
(4) wasting time

42. I ___________ written a letter.
Choose the most appropriate word.
(1) have (2) have been (3) has (4) has been

43. Man is a social animal.
Identify the subject in the above sentence.
(1) animal (2) social (3) is (4) man

44. Excuse me, can you help me in locating the book, 'My Experiment with Truth'.
The language function used in the above sentence is
(1) seeking information
(2) seeking permission
(3) offering help
(4) suggesting



Naukri Messenger
Your dream jobs here

Scanned with CamScanner

45. Actions speak louder than ________

Complete the proverb with the appropriate word.

(1) statement (2) words (3) promise (4) thoughts

46. Making a cup of tea is not a difficult task. Rearrange the following sequentially.

A. Pour some water in a pan and set it to boil.

B. Cover the pan with a lid and let the tea brew.

C. Add tea leaves to the boiling water.

D. After a few minutes, pour the tea into the teapot.

E. Then add sugar and milk according to taste.

(1) A B E C D

(2) A D E C B

(3) A C B E D

(4) A E D C B

Read the following passage and choose alternatives for the questions **47 – 50** :

One day a young mother left her sleeping toddler on the floor and went out to fetch water in a pot, leaving her pet mongoose in charge of the baby.

When she returned a little later, she found the mongoose with its mouth full of blood lying near the doorstep. Presuming that the mongoose had killed the sleeping baby, in her anguish, she took the iron rod lying nearby, and killed the animal with it. Later, when she entered the room where she had left her baby asleep, she saw a venomous viper lying dead, next to the baby's bed, its body in pieces strewn around. She gasped in horror as she took in the scene, realizing that her baby had been unharmed as the mongoose had fought with the snake and had killed it. All her remorse and lament could not bring her pet mongoose back to life.

47. Why did the mother leave her sleeping child ?

(1) to fetch water (2) to buy vegetables

(3) to go to the market (4) to meet her friends

48. What did the mother see on the mouth of mongoose when she came back home ?

(1) water (2) blood (3) milk (4) soil

49. What did the mother use to kill the mongoose ?

(1) bucket (2) wood (3) steel rod (4) iron rod

50. The venomous viper was killed by the

(1) mother (2) baby (3) mongoose (4) neighbours



Naukri Messenger
Your dream jobs here

Scanned with CamScanner

## KANNADA MEDIUM
## ಸಾಮಾನ್ಯ ಜ್ಞಾನ

51. 'ಚಿದಂಬರ ರಹಸ್ಯ' ಕೃತಿಯ ಕರ್ತೃ
   (1) ಕುವೆಂಪು
   (2) ಕೆ. ಪಿ. ಪೂರ್ಣಚಂದ್ರ ತೇಜಸ್ವಿ
   (3) ಲಂಕೇಶ್
   (4) ಗಿರೀಶ್ ಕಾರ್ನಾಡ್

52. 'ಭಾರತದ ನೆಪೋಲಿಯನ್' ಎಂದು ಕರೆಯಲ್ಪಡುವ ರಾಜ
   (1) ಚಂದ್ರಗುಪ್ತ ಮೌರ್ಯ
   (2) ಸಮುದ್ರಗುಪ್ತ
   (3) ಬಿಂದುಸಾರ
   (4) ಅಶೋಕ

53. BCCI ನ ವಿಸ್ತೃತ ರೂಪ
   (1) Board of Control Cycle in India
   (2) Board of Committee of Cricket in India
   (3) Board of Control for Cricket in India
   (4) Board of Control Committee in India

54. ಲಾರ್ಡ್ಸ್ ಕ್ರಿಕೆಟ್ ಕ್ರೀಡಾಂಗಣವಿರುವ ಸ್ಥಳ
   (1) ಸಿಡ್ನಿ
   (2) ಮಾಂಚೆಸ್ಟರ್
   (3) ದೆಹಲಿ
   (4) ಲಂಡನ್

55. ಭಾರತದಲ್ಲಿ 'ರಾಷ್ಟ್ರೀಯ ವಿಜ್ಞಾನ ದಿನ'ವನ್ನು ಆಚರಿಸುವ ದಿನ
   (1) 28ನೇ ಫೆಬ್ರವರಿ
   (2) 28ನೇ ಮಾರ್ಚ್
   (3) 28ನೇ ಜನವರಿ
   (4) 28ನೇ ಏಪ್ರಿಲ್

56. 'ವೈರಸ್'ಗಳ ಬಗೆಗಿನ ಅಧ್ಯಯನದ ವಿಜ್ಞಾನದ ಶಾಖೆ
   (1) ಯುರೋಲಜಿ
   (2) ವೈರಾಲಜಿ
   (3) ನ್ಯೂರೋಲಜಿ
   (4) ಪ್ಯಾಥೋಲಜಿ

57. ಕನ್ನಡದ 'ಬೆಟ್ಟದ ಹೂವು' ಚಿತ್ರಕ್ಕೆ ರಾಷ್ಟ್ರ ಪ್ರಶಸ್ತಿ ಪಡೆದ ಬಾಲನಟ
   (1) ಪುನೀತ್ ರಾಜ್‌ಕುಮಾರ್
   (2) ಮಂಜುನಾಥ್
   (3) ಆನಂದ್
   (4) ಶ್ರೀ ಮುರಳಿ

58. ಕೆನಡಾ ದೇಶದ ರಾಜಧಾನಿ
   (1) ಒಟ್ಟಾವ
   (2) ಟೊರ್‍ಯಾಂಟೋ
   (3) ಹ್ಯಾಮಿಲ್ಟನ್
   (4) ಮಾಸ್ಕೋ



Naukri Messenger
Your dream jobs here

Scanned with CamScanner

59. ಈ ಕೆಳಗಿನ ಯಾವುದು ಸರಿಯಾಗಿ ಹೊಂದಾಣಿಕೆಯಾಗಿಲ್ಲ?


(1) ಬಿಳಿ ಕ್ರಾಂತಿ – ಹಾಲು

(2) ಹಸಿರು ಕ್ರಾಂತಿ – ಕೃಷಿ

(3) ನೀಲಿ ಕ್ರಾಂತಿ – ಮೀನು

(4) ಕೆಂಪು ಕ್ರಾಂತಿ – ಉಣ್ಣೆ

60. ಬಿಟ್ಟುಹೋದ ಸಂಖ್ಯೆಯನ್ನು ಕಂಡುಹಿಡಿಯಿರಿ.





(1) 5 (2) 18 (3) 36 (4) 27

61. A = 26, CAT = 57, ಆದರೆ SUN = ?

(1) 47 (2) 27 (3) 37 (4) 57


62. ಈ ಆಕೃತಿಯಲ್ಲಿರುವ ಒಟ್ಟು ತ್ರಿಭುಜಗಳ ಸಂಖ್ಯೆ





(1) 6 (2) 10 (3) 4 (4) 12


63. ಕೊಟ್ಟಿರುವ ಪದಗಳಿಗೆ ಹೊಂದಿಕೆಯಾಗುವ ಸೂಕ್ತ ವೆನ್ ನಕ್ಷೆ:

ನವಿಲುಗಳು, ಪಕ್ಷಿಗಳು, ಒಂಟೆಗಳು

(1) 

(2) 

(3) 

(4) 



Naukri Messenger
Your dream jobs here

Scanned with CamScanner

**64.** ಮೊದಲೆರಡು ಸಂಖ್ಯೆಗಳಿಗಿರುವ ಸಂಬಂಧವನ್ನು ಗುರುತಿಸಿ ಬಿಟ್ಟು ಹೋದ ಸಂಖ್ಯೆಯನ್ನು ಕಂಡುಹಿಡಿಯಿರಿ.

2 : 9 : : 5 : ?

(1) 36
(2) 16
(3) 25
(4) 49

**65.** ಒಬ್ಬ ವ್ಯಕ್ತಿಯು ಉತ್ತರಕ್ಕೆ 20 m ನಡೆದು, ಎಡಕ್ಕೆ ತಿರುಗಿ 40 m ನಡೆಯುತ್ತಾನೆ. ಮತ್ತೆ ಎಡಕ್ಕೆ ತಿರುಗಿ 20 m ನಡೆಯುತ್ತಾನೆ. ಆಮೇಲೆ ಬಲಕ್ಕೆ ತಿರುಗಿ 20 m ನಡೆಯುತ್ತಾನೆ. ಹಾಗಾದರೆ ಅವನು ಮೂಲಸ್ಥಳದಿಂದ ಎಷ್ಟು ದೂರದಲ್ಲಿದ್ದಾನೆ ?

(1) 20 m
(2) 30 m
(3) 50 m
(4) 60 m

**66.** ಒಂದು ವೇಳೆ 'A' ಯನ್ನು '+' ಎಂದು, 'B' ಯನ್ನು '–' ಎಂದು, 'C'ಯನ್ನು '×' ಎಂದು ಬರೆದರೆ 10C4A4C4B6 = ?

(1) 50
(2) 42
(3) 58
(4) 46

**67.** ಅತಿ ಹೆಚ್ಚು ಪುರುಷರ ಲಾನ್ ಟೆನ್ನಿಸ್ ಗ್ರಾಂಡ್ ಸ್ಲಾಮ್ ಪ್ರಶಸ್ತಿ ಪಡೆದ ಆಟಗಾರ

(1) ಪೀಟ್ ಸಾಂಪ್ರಸ್
(2) ರೋಜರ್ ಫೆಡರರ್
(3) ರಾಫೆಲ್ ನಡಾಲ್
(4) ನೊವಾಕ್ ಜೊಕೋವಿಕ್

**68.** "ಜಲಶಕ್ತಿ ಅಭಿಯಾನ"ದ ಪ್ರಮುಖ ಉದ್ದೇಶ

(1) ಪ್ರತಿ ಮನೆಗೂ ಕೊಳವೆಯಲ್ಲಿ ಅಡುಗೆ ಅನಿಲ ಸರಬರಾಜು ಮಾಡುವುದು
(2) ಪ್ರತಿ ಮನೆಗೂ ಕೊಳವೆಯಲ್ಲಿ ನೀರು ಸರಬರಾಜು ಮಾಡುವುದು
(3) ಪ್ರತಿ ಹಳ್ಳಿಯಲ್ಲೂ ಕೊಳವೆ ಬಾವಿ ಕೊರೆಸುವುದು
(4) ಪ್ರತಿ ಹಳ್ಳಿಗೂ ನೀರಿನ ಶುದ್ಧೀಕರಣ ಘಟಕವನ್ನು ಅಳವಡಿಸುವುದು

**69.** ವೈದ್ಯಕೀಯ ಕ್ಷೇತ್ರದಲ್ಲಿನ ಸಾಧನೆಗೆ "ಪದ್ಮವಿಭೂಷಣ ಪ್ರಶಸ್ತಿ – 2021"ನ್ನು ಪಡೆದ ಕನ್ನಡಿಗ

(1) ಸುದರ್ಶನ ಸಾಹೊ
(2) ಬಿ. ಎಮ್. ಹೆಗಡೆ
(3) ಕೃಷ್ಣ ಮೋಹನ್ ಪತಿ
(4) ಧನಂಜಯ ದಿವಾಕರ



Scanned with CamScanner

70. ಭಾರತದಲ್ಲಿ ಮೊದಲ ಬಾರಿಗೆ ಯಂಗ್ ರೀಡರ್ ಬೋಟ್ ಲೈಬ್ರರಿಯನ್ನು ಪ್ರಾರಂಭಿಸಿದ ರಾಜ್ಯ

(1) ಕರ್ನಾಟಕ
(2) ಪಶ್ಚಿಮ ಬಂಗಾಳ
(3) ಗುಜರಾತ್
(4) ಕೇರಳ

71. ಕರ್ನಾಟಕದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ನೀಡಲ್ಪಡುವ ಅತ್ಯುನ್ನತ ಸಾಹಿತ್ಯಿಕ ಗೌರವ ಪ್ರಶಸ್ತಿ

(1) ಪಂಪ ಪ್ರಶಸ್ತಿ
(2) ಕೆಂಪೇಗೌಡ ಪ್ರಶಸ್ತಿ
(3) ಕನಕಶ್ರೀ ಪ್ರಶಸ್ತಿ
(4) ಜಕಣಾಚಾರಿ ಪ್ರಶಸ್ತಿ

72. ಕರ್ನಾಟಕದಲ್ಲಿ SSLC ಪರೀಕ್ಷೆಯನ್ನು ಯಶಸ್ವಿಯಾಗಿ ಪೂರೈಸಿದ ರೈತರ ಮಕ್ಕಳ ಮುಂದಿನ ವಿದ್ಯಾಭ್ಯಾಸದ ಸಲುವಾಗಿ ಪ್ರತೀ ವರ್ಷ ಶಿಷ್ಯ ವೇತನ ಒದಗಿಸುವ ಕಾರ್ಯಕ್ರಮ

(1) ಮುಖ್ಯಮಂತ್ರಿ ರೈತ ವಿದ್ಯಾ ನಿಧಿ
(2) ವಿದ್ಯಾಂಜಲಿ
(3) ಮುಖ್ಯಮಂತ್ರಿ ರೈತ ನಿಧಿ
(4) ಶಿಕ್ಷಣ ಕಿರಣ

73. 2021 ರಲ್ಲಿ ವಿಶ್ವಸಂಸ್ಥೆಯ ಹವಾಮಾನ ಬದಲಾವಣೆಯ ಶೃಂಗ ಸಭೆ ನಡೆದ ಸ್ಥಳ

(1) ಮ್ಯಾಡ್ರಿಡ್
(2) ದುಬೈ
(3) ಗ್ಲಾಸ್‌ಗೊ
(4) ಡರ್ಬನ್

74. "The furrows in a field, the unexplored life" ಎಂಬ ಜೀವನ ಚರಿತ್ರೆ ಪುಸ್ತಕವು ಇವರಿಗೆ ಸಂಬಂಧಿಸಿದೆ

(1) ಐ. ಕೆ. ಗುಜ್ರಾಲ್
(2) ಪಿ. ವಿ. ನರಸಿಂಹರಾವ್
(3) ಹೆಚ್. ಡಿ. ದೇವೇಗೌಡ
(4) ವಿ. ಪಿ. ಸಿಂಗ್

75. ವಿಶ್ವದ ಅತಿ ಎತ್ತರದ ರೈಲ್ವೆ ಸೇತುವೆ ಇರುವುದು

(1) ಸಟ್ಲೆಜ್ ನದಿಯ ಮೇಲೆ
(2) ಯಮುನ ನದಿಯ ಮೇಲೆ
(3) ನರ್ಮದ ನದಿಯ ಮೇಲೆ
(4) ಚಿನಾಬ್ ನದಿಯ ಮೇಲೆ



Scanned with CamScanner

## ಶೈಕ್ಷಣಿಕ ಮನೋವಿಜ್ಞಾನ, ಮಗುವಿನ ಬೆಳವಣಿಗೆ ಮತ್ತು ಬೋಧನಾಶಾಸ್ತ್ರ

**76.** ಡಿಸ್ಲೆಕ್ಸಿಯಾ ಸ್ಥಿತಿಯು ಹೊಂದಿರುವ ಕ್ಲಿಷ್ಟತೆ

(1) ಓದುವುದು (2) ಮಾತನಾಡುವುದು (3) ಕೇಳುವುದು (4) ವೀಕ್ಷಿಸುವುದು

**77.** ಅಂತರಾವಲೋಕನ ತಂತ್ರಗಳನ್ನು ಬಳಸಿ ಒಬ್ಬ ವ್ಯಕ್ತಿಯ ವರ್ತನೆಯನ್ನು ಪ್ರಾಯೋಗಿಕವಾಗಿ ಕಾರಣೀಕರಿಸಲು ಸಾಧ್ಯವಿಲ್ಲದ ಒಂದು ಸನ್ನಿವೇಶ

(1) ಒಬ್ಬ ವ್ಯಕ್ತಿಯು ಹತಾಶೆಗೊಳಗಾದಾಗ

(2) ಒಬ್ಬ ವ್ಯಕ್ತಿಯು ಸಂತೋಷವನ್ನು ಅನುಭವಿಸುತ್ತಿರುವಾಗ

(3) ಒಬ್ಬ ವ್ಯಕ್ತಿಯು ಇತರ ಚಟುವಟಿಕೆಗಳಲ್ಲಿ ಭಾಗಿಯಾದಾಗ

(4) ಒಬ್ಬ ವ್ಯಕ್ತಿಯು ಉದ್ದೇಶಪೂರ್ವಕವಾಗಿ ಅಭಿನಯಿಸಿದಾಗ

**78.** ತನ್ನ ತಂಡದ ಸದಸ್ಯರೊಬ್ಬರ ಕೆಲಸದ ಪ್ರಮಾಣವನ್ನು ಅವಲೋಕಿಸಲು ಮೇಲ್ವಿಚಾರಕರು ಅಳವಡಿಸುವ ವಿಧಾನ

(1) ಅನೌಪಚಾರಿಕ ಅವಲೋಕನ (2) ಪಾಲ್ಗೊಳ್ಳದ ಅವಲೋಕನ

(3) ಪಾಲ್ಗೊಳ್ಳುವಿಕೆ ಅವಲೋಕನ (4) ಔಪಚಾರಿಕ ಅವಲೋಕನ

**79.** ಸ್ವತಂತ್ರ ಚಲಕ : ಪ್ರಚೋದನೆ : : ಅವಲಂಬಿ ಚಲಕ :

(1) ಪ್ರತಿಕ್ರಿಯೆ (2) ಸಾಧನ (3) ಸ್ಥಿರ (4) ಪ್ರಯೋಗಕರ್ತ

**80.** ವಿದ್ಯಾರ್ಥಿಯ ಶೈಕ್ಷಣಿಕ ಪ್ರಗತಿಯನ್ನು ಅರ್ಥಮಾಡಿಕೊಳ್ಳಲು ಆತನ ಅಂಕಪಟ್ಟಿಯನ್ನು ಗಮನಿಸಬಹುದು. ಇದಕ್ಕೆ ಬಳಸಬಹುದಾದ ವಿಧಾನ

(1) ಅವಲೋಕನ (2) ವ್ಯಕ್ತಿ – ಅಧ್ಯಯನ

(3) ಅಂತರಾವಲೋಕನ (4) ಪ್ರಾಯೋಗಿಕ

**81.** ಅನ್ಯೋನ್ಯತೆ ಮತ್ತು ನಿಕಟ ಸ್ನೇಹವನ್ನು ವ್ಯಕ್ತಪಡಿಸುವುದು

(1) ಪೂರ್ವ ಬಾಲ್ಯಾವಸ್ಥೆ (2) ಉತ್ತರ ಬಾಲ್ಯಾವಸ್ಥೆ

(3) ತಾರುಣ್ಯಾವಸ್ಥೆ (4) ಮಧ್ಯಮ ಪ್ರೌಢಾವಸ್ಥೆ

**82.** **ಹೇಳಿಕೆ (A)** : ಜೀವಿಯಲ್ಲಿ ಉಂಟಾಗುವ ಪರಿಮಾಣಾತ್ಮಕ ಮತ್ತು ಗುಣಾತ್ಮಕ ಬದಲಾವಣೆಯೇ ವಿಕಾಸ.

**ಹೇಳಿಕೆ (B)** : ಯಾವುದೇ ಜೀವಿಯಲ್ಲಿ ಉಂಟಾಗುವ ವಿಕಾಸವು ಬೆಳವಣಿಗೆ, ಸಾಮರ್ಥ್ಯ, ಪಕ್ವತೆ ಮತ್ತು ಪರಿಸರದೊಂದಿಗಿನ ಅನುಕ್ರಿಯೆಯನ್ನು ಒಳಗೊಂಡಿರುತ್ತದೆ.

(1) ಹೇಳಿಕೆ (A) ಯು ಸರಿಯಾಗಿದೆ ಮತ್ತು ಹೇಳಿಕೆ (B) ಯು ಹೇಳಿಕೆ (A) ಗೆ ಸಮರ್ಥನೀಯವಾಗಿದೆ

(2) ಹೇಳಿಕೆ (A) ಯು ಸರಿಯಾಗಿದೆ ಮತ್ತು ಹೇಳಿಕೆ (B) ಯು ಹೇಳಿಕೆ (A) ಗೆ ಸಮರ್ಥನೀಯವಾಗಿಲ್ಲ

(3) ಹೇಳಿಕೆ (A) ಯು ತಪ್ಪಾಗಿದೆ ಮತ್ತು ಹೇಳಿಕೆ (B) ಮಾತ್ರ ಸರಿಯಾಗಿದೆ

(4) ಹೇಳಿಕೆ (A) ಮತ್ತು (B) ಎರಡು ಸಹ ತಪ್ಪಾಗಿದೆ



Scanned with CamScanner

83. ಎಲ್ಲಾ ಮಕ್ಕಳು ಏಕ ರೀತಿಯ ವಿಕಾಸದ ಹಂತಗಳನ್ನು ಪ್ರದರ್ಶಿಸಿದರೂ, ಅವರ ವಿಕಾಸದ ಅವಧಿಯಲ್ಲಿ ವ್ಯತ್ಯಯವಾಗಿರುತ್ತದೆ. ಇದರಲ್ಲಿ ಅಡಗಿರುವ ತತ್ವ

(1) ವೈವಿಧ್ಯತೆಯ ತತ್ವ
(2) ಅನನ್ಯತೆಯ ತತ್ವ
(3) ಅಂತರ ಸಂಬಂಧಿತ ತತ್ವ
(4) ನಿರಂತರತೆಯ ತತ್ವ

84. ಪಟ್ಟಿ– 1 ರಲ್ಲಿ ನೀಡಿರುವ ನೈತಿಕ ವಿಕಾಸದ ಹಂತಗಳನ್ನು ಪಟ್ಟಿ– 2 ರಲ್ಲಿರುವ ವಿಕಾಸದ ಅವಧಿಯೊಂದಿಗೆ ಸರಿಯಾಗಿ ಹೊಂದಿಸಿದಾಗ

| ಪಟ್ಟಿ – 1 | ಪಟ್ಟಿ – 2 |
|---|---|
| I. ನಂಬಿಕೆ v/s ಅಪನಂಬಿಕೆ | a. 1½ ವರ್ಷದಿಂದ 3 ವರ್ಷ |
| II. ಸ್ವಾಯತ್ತತೆ v/s ನಾಚಿಕೆ ಮತ್ತು ಅನುಮಾನ | b. ಹುಟ್ಟಿನಿಂದ 1½ ವರ್ಷ |
| III. ಉಪಕ್ರಮಿಸುವಿಕೆ v/s ಅಪರಾಧ ಮನೋಭಾವ | c. 6 ವರ್ಷದಿಂದ 12 ವರ್ಷ |
| IV. ಕಾರ್ಯಶೀಲತೆ v/s ಕೀಳರಿಮೆ | d. 3 ವರ್ಷದಿಂದ 6 ವರ್ಷ |

(1) I – b, II – a, III – d, IV – c
(2) I – a, II – b, III – c, IV – d
(3) I – c, II – a, III – b, IV – d
(4) I – d, II – c, III – a, IV – b

85. ಒಂದು ಮಗು ತತ್‌ಕ್ಷಣದಲ್ಲಿ ಸಂಘಶೀಲತೆ ವರ್ತನೆಯನ್ನು ತೋರಿಸಲು ಮುಂದಾಗುತ್ತದೆ. ಈ ವರ್ತನೆಗೆ ಸಹಭಾಗಿತ್ವವಾಗಿರುವ ಸಂವೇದನೆ

(1) ಮಾಲೀಕತ್ವದ ಭಾವ
(2) ಸೃಜನಾತ್ಮಕತೆಯ ಭಾವ
(3) ಒಂಟಿತನದ ಭಾವ
(4) ಭಯದ ಭಾವ

86. ಭಾಷೆ, ಶಾಲೆ ಅಥವಾ ಪೋಷಕರಿಂದ ಪಡೆಯುವ ತರಬೇತಿ ಮೂಲಕ ಮಗುವಿನಲ್ಲಿ ಉಂಟಾಗುವ ಕಲಿಕೆಗೆ ಒತ್ತು ನೀಡುವ ವಿಕಾಸದ ಒಂದು ಘಟಕಾಂಶ

(1) ಬೆಳವಣಿಗೆ
(2) ಪರಿಪಕ್ವತೆ
(3) ಅನುಭವ
(4) ಸಾಮಾಜಿಕ ಪ್ರಸರಣ

87. ಪಿಯಾಜೆರವರ ಪ್ರಕಾರ ಮಗುವು ನೈತಿಕವೂ ಅಲ್ಲದ ಅನೈತಿಕವೂ ಅಲ್ಲದ ವರ್ತನೆಗಳನ್ನು ತೋರ್ಪಡಿಸುವ ನೈತಿಕ ವಿಕಾಸದ ಹಂತ

(1) ಸಂಬಂಧ ಭಾವಹೀನ ಹಂತ (Anomy)
(2) ಪರಾಧಿಪತ್ಯ ಹಂತ (Heteronomy)
(3) ಸ್ವಯಂ ಅಧಿಪತ್ಯ ಹಂತ (Autonomy)
(4) ಪರಸ್ಪರಾನು ಕ್ರಿಯೆ ಹಂತ (ವ್ಯತ್ಕ್ರಮತಾ ಹಂತ) (Reciprocity)

88. ಉತ್ತರ ಬಾಲ್ಯದ ಕೊನೆ ಹಂತದ ವಿದ್ಯಾರ್ಥಿಗಳ ದೈಹಿಕ ವಿಕಾಸಕ್ಕೆ ಸಂಬಂಧಿಸಿದಂತೆ ಸೂಕ್ತವಲ್ಲದ ಹೇಳಿಕೆಯನ್ನು ಗುರುತಿಸಿ.

(1) ಹಾಲು ಹಲ್ಲುಗಳು ಶಾಶ್ವತ ಹಲ್ಲುಗಳಿಂದ ಸ್ಥಾನಾಂತರಗೊಳ್ಳುತ್ತದೆ
(2) ಕರಕುಶಲ ಕೌಶಲ್ಯವು ವಿಕಾಸಗೊಳ್ಳುತ್ತದೆ
(3) ಬಾಲಕರ ಎತ್ತರವು ಬಾಲಕಿಯರ ಎತ್ತರಕ್ಕಿಂತ ಹೆಚ್ಚಾಗಿರುತ್ತದೆ
(4) ಬಾಲಕಿಯರ ಎತ್ತರವು ಬಾಲಕರ ಎತ್ತರಕ್ಕಿಂತ ಹೆಚ್ಚಾಗಿರುತ್ತದೆ



Scanned with CamScanner

**89.** ಹೇಳಿಕೆ (A) : ಒಬ್ಬ ವಿದ್ಯಾರ್ಥಿಗೆ ನೀವು ಸಮಸ್ಯೆಯನ್ನು ನೀಡಿದರೆ ಅದನ್ನು ಪೂರ್ಣಗೊಳಿಸಲು ಆತನು 3 ಅಥವಾ ಅದಕ್ಕಿಂತ ಹೆಚ್ಚು ದಿನಗಳ ಕಾಲಾವಕಾಶ ತೆಗೆದುಕೊಳ್ಳುತ್ತಾನೆ ಹಾಗೆ ಪ್ರತೀ ದಿನವೂ ಅದೇ ಕ್ರಮಾನುಗತಿಯಲ್ಲಿ ಸ್ವಲ್ಪ ಮಾರ್ಪಾಡುಗಳೊಂದಿಗೆ ಸಾಗುತ್ತಾನೆ.

ಹೇಳಿಕೆ (B) : ಕಲಿಯುವ ವಿದ್ಯಾರ್ಥಿಗಳು ಸಾಮಾನ್ಯವಾಗಿ ನಿಧಾನಗತಿಯೂ, ವಿಧಾನವನ್ನು ಒಳಗೊಂಡಂತೆ ವ್ಯವಸ್ಥಿತವಾಗಿ ಹೊಸ ವಿಚಾರವನ್ನು ಗಳಿಸಿಕೊಳ್ಳುತ್ತಾರೆ.

(1) ಹೇಳಿಕೆ (A) ಯು ಸರಿಯಾಗಿದೆ ಮತ್ತು ಹೇಳಿಕೆ (B) ಯು ಹೇಳಿಕೆ (A) ಗೆ ಪೂರಕವಾಗಿದೆ
(2) ಹೇಳಿಕೆ (A) ಯು ಸರಿಯಾಗಿದೆ ಮತ್ತು ಹೇಳಿಕೆ (B) ಯು ಹೇಳಿಕೆ (A) ಗೆ ಪೂರಕವಾಗಿಲ್ಲ
(3) ಹೇಳಿಕೆ (A) ಯು ಸರಿಯಾಗಿಲ್ಲ, ಹೇಳಿಕೆ (B) ಯು ಸರಿಯಾಗಿದೆ
(4) ಹೇಳಿಕೆ (A) ಮತ್ತು (B) ಸರಿಯಾಗಿಲ್ಲ

**90.** ಒಂದು ಮಗು ಇತರರಿಗೆ ತನ್ನಿಂದ ತಪ್ಪಾದಾಗ ಅಪರಾಧ ಮನೋಭಾವವನ್ನು ಅನುಭವಿಸುತ್ತದೆ. ಮಗುವಿನ ಈ ವರ್ತನೆಗೆ ಕಾರಣವಾದ ವಿಕಾಸ

(1) ಸಾಮಾಜಿಕ (2) ದೈಹಿಕ
(3) ಬೌದ್ಧಿಕ (4) ಸೌಂದರ್ಯೋಪಾಸನ

**91.** ನಗರದ ಮಕ್ಕಳ ವಸ್ತ್ರವಿನ್ಯಾಸ, ಮಾತುಗಾರಿಕೆ ಮುಂತಾದ ಅಂಶಗಳು ಹಳ್ಳಿಯವರಿಂದ ಅನುಕರಣೆ ಒಳಪಡುತ್ತದೆ. ಇದರಲ್ಲಿ ಅಡಗಿರುವ ಅನುಕರಣೆಯ ನಿಯಮವು

(1) ಮೇಲುಸ್ತರದಿಂದ ಕೆಳಸ್ತರದವರೆಗೆ (2) ಆಂತರಿಕದಿಂದ ಬಾಹ್ಯದ ಕಡೆಗೆ
(3) ಕೆಳಸ್ತರದಿಂದ ಮೇಲುಸ್ತರದ ಕಡೆಗೆ (4) ಬಾಹ್ಯದಿಂದ ಆಂತರಿಕದ ಕಡೆಗೆ

**92.** ದೈಹಿಕ ಶಿಕ್ಷಣ ಬೋಧಕರು ಬಾಸ್ಕೆಟ್ ಬಾಲ್ ಕ್ರೀಡೆಗಾಗಿ ಎತ್ತರದ ಆಧಾರದ ಮೇಲೆ ಅಭ್ಯರ್ಥಿಯನ್ನು ಆಯ್ಕೆ ಮಾಡುತ್ತಾರೆ. ಎತ್ತರವು ಇದರ ಫಲವಾಗಿದೆ

(1) ಪರಿಸರ (2) ಅನುವಂಶೀಯತೆ
(3) ಪಕ್ವತೆ (4) ತರಬೇತಿ

**93.** ತರುಣರು ನಿಷ್ಠಾಭಾವವನ್ನು ಇವರೆಡೆಗೆ ಬೆಳೆಸಿಕೊಳ್ಳುತ್ತಾರೆ

(1) ಪೋಷಕರು (2) ಒಡಹುಟ್ಟಿದವರು
(3) ಸಮವಯಸ್ಕರು (4) ಶಿಕ್ಷಕರು

**94.** ಅಪರಾಧ ಮತ್ತು ಸಮಸ್ಯೆ ವರ್ತನೆಯ ಇತಿಹಾಸವನ್ನು ಹೊಂದಿರುವ ತರುಣರಲ್ಲಿ ಕಂಡುಬರುವ ಸಂಕೇತ

(1) ತನ್ನತನದ ಗೊಂದಲ (2) ಋಣಾತ್ಮಕ ಸ್ವಬಿಂಬ
(3) ತನ್ನತನದ ಸ್ಥಿತಿ (4) ತನ್ನತನದ ವಿಷಮ ಸ್ಥಿತಿ



Scanned with CamScanner

95. ವಿದ್ಯಾರ್ಥಿಯು ನೃತ್ಯ ಪ್ರದರ್ಶನದಲ್ಲಿ ಕಣ್ಣು ಮತ್ತು ಕೈಗಳ ಸಮನ್ವಯತೆಯನ್ನು ಬಳಸುತ್ತಾನೆ. ಈ ಪ್ರಕ್ರಿಯೆಗೆ ಕಾರಣವಾಗುವ ವಿಕಾಸವು
(1) ಸ್ನಾಯು ವಿಕಾಸ
(2) ಸಂಜ್ಞಾನಾತ್ಮಕ ವಿಕಾಸ
(3) ಬೌದ್ಧಿಕ ವಿಕಾಸ
(4) ಸಂವೇದನಾ ವಿಕಾಸ

96. ಶಾಲೆಯಲ್ಲಿ ಮಧ್ಯಾಹ್ನ 3ಕ್ಕೆ ಬಾರಿಸುವ ಗಂಟೆಯ ಶಬ್ದದ ನಂತರ ವಿದ್ಯಾರ್ಥಿಗಳು ಶಾಲೆಯಿಂದ ಹೊರಗೆ ಹೋಗುತ್ತಾರೆ. ಈ ವರ್ತನೆಯ ಸ್ವರೂಪ
(1) ಪಕ್ವತೆ (2) ಸಂವೇಗ (3) ಆಲೋಚನೆ (4) ಕಲಿಕೆ

97. ಪರಿಹಾರ ಸಮಸ್ಯೆಗೆ ತಂತ್ರವಲ್ಲದ್ದು
(1) ಹಂತ ವಿಭಜನ (ಅಲ್ಗೋರಿದಮ್)
(2) ಸತ್ಯಾನ್ವೇಷಣೆ
(3) ಪ್ರಾಯೋಗಿಕತೆ
(4) ಸರಾಸರಿ-ಅಂತಿಮ ವಿಶ್ಲೇಷಣೆ

98. ಬೋಧನಾ-ಕಲಿಕಾ ಪ್ರಕ್ರಿಯೆಯಲ್ಲಿ ಕಲಿಕೆಯನ್ನು ಪರಿಣಾಮಕಾರಿ ಮಾಡುವಲ್ಲಿ ಶಿಕ್ಷೆಯನ್ನು ಬಳಸಲಾಗುತ್ತದೆ. ಇದನ್ನು ಪ್ರತಿನಿಧಿಸುವುದು
(1) ಕ್ರಿಯಾ ಪ್ರಸೂತ ಅನುಬಂಧನ
(2) ಪ್ರಬಲ ಅಪೇಕ್ಷೆ ಶಾಸ್ತ್ರೀಯ ಅನುಬಂಧನ
(3) ವಿಮುಖ ಶಾಸ್ತ್ರೀಯ ಅನುಬಂಧನ
(4) ಸಾಮಾಜಿಕ ಕಲಿಕೆ

99. ಘಟಕವನ್ನು ಪೂರ್ಣಗೊಳಿಸಿದ ನಂತರ ಶಿಕ್ಷಕರು ನೀಡಿದ ನಿಯೋಜಿತ ಕಾರ್ಯವನ್ನು ವಿದ್ಯಾರ್ಥಿ ಬರೆಯುತ್ತಾನೆ. ಪ್ರಸ್ತುತ ಸನ್ನಿವೇಶದಲ್ಲಿ ಕಂಡುಬರುವ ಕಲಿಕೆಯು
(1) ಅಂತರ್‌ದೃಷ್ಟಿ
(2) ಕ್ರಿಯಾ ಪ್ರಸೂತ ಅನುಬಂಧನ
(3) ಸಾಮಾಜಿಕ
(4) ಯತ್ನ ಮತ್ತು ದೋಷ

100. ವಸ್ತುಗತ ಮೌಲ್ಯೀಕರಣದ ಸ್ವರೂಪವು
(1) ಮುಂದಿನ ವರ್ಗಕ್ಕೆ ಮಗುವು ತೇರ್ಗಡೆಯಾಗಿರುವುದನ್ನು ಘೋಷಿಸಲು
(2) ಮಗುವು ಏನನ್ನು ಕಲಿತಿದೆ ಎಂದು ತಿಳಿಯಲು
(3) ಮಗುವಿನ ವಿಷಯ ಮಂಡನೆಯನ್ನು ತಿಳಿಯಲು
(4) ಮಗುವಿನ ವೈಯಕ್ತಿಕ ವ್ಯತ್ಯಾಸವನ್ನು ತಿಳಿಯಲು

101. ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಹಿರಿಯ ವಿದ್ಯಾರ್ಥಿಗಳ ಮೇಲೆ ದೀರ್ಘ ಪರಿಣಾಮ ಬೀರುವ ಒಂದು ಕಾರಕ
(1) ಮನೆ ವಾತಾವರಣ
(2) ಮನೋಧೋರಣೆ
(3) ಸ್ವಯಂ-ಪರಿಕಲ್ಪನೆ
(4) ಒಡಹುಟ್ಟಿದವರೊಂದಿಗಿನ ಘರ್ಷಣೆ

102. ಗಾರ್ನರ್‌ರವರ ಬಹು ವೈಖರಿ ಮಾದರಿಯ ಪ್ರಕಾರ ನಿರ್ದಿಷ್ಟ ವೈಖರಿಯ ಕಲಿಕಾರ್ಥಿಗಳ ಸಂಖ್ಯೆಯು
(1) ನಾಲ್ಕು (2) ಆರು (3) ಏಳು (4) ಐದು



Scanned with CamScanner

**103.** ಪಟ್ಟಿ – 1 ರಲ್ಲಿರುವ ಸೃಜನಾತ್ಮಕ ಆಲೋಚನೆಯ ಘಟಕಗಳು ಮತ್ತು ವಿವರಣೆಯನ್ನು ಪಟ್ಟಿ – 2 ರೊಂದಿಗೆ ಹೊಂದಿಸಿ.

| ಪಟ್ಟಿ – 1 | ಪಟ್ಟಿ – 2 |
|---|---|
| I. ನಿರರ್ಗಳತೆ | a. ಹೊಸತನ್ನು ಕಲ್ಪಿಸುವುದು |
| II. ನಮ್ಯತೆ | b. ಇತರರ ಕಲ್ಪನೆಗಳ ಮೇಲೆ ನಿರ್ಮಿಸುವುದು |
| III. ಸ್ವಂತಿಕೆ | c. ದೃಷ್ಟಿಕೋನವನ್ನು ಸುಲಭವಾಗಿ ಬದಲಾಯಿಸುವುದು |
| IV. ವಿಸ್ತರಣೆ | d. ಹೊಸ ಕಲ್ಪನೆಗಳನ್ನು ಸೃಷ್ಟಿಸುವುದು |

**ಸಂಕೇತ :**

| | I | II | III | IV |
|---|---|---|---|---|
| (1) | a | d | c | b |
| (2) | d | a | b | c |
| (3) | a | b | d | c |
| (4) | d | c | a | b |

**104.** ಆ್ಯಂಡರ್‌ಸನ್‌ರವರ ವರ್ಗೀಕರಣದಂತೆ ಈ ಕೆಳಗೆ ನೀಡಿರುವ ಜ್ಞಾನದ ಮಟ್ಟಗಳನ್ನು ಅನುಕ್ರಮಿಕವಾಗಿ ಬರೆಯಿರಿ.

I. ಕಾರ್ಯಕಾರಿ

II. ವಾಸ್ತವಿಕ

III. ಮೆಟಾಕಾಗ್ನಿಷನ್

IV. ಪರಿಕಲ್ಪನಾತ್ಮಕ

**ಸಂಕೇತ :**

| | | | | |
|---|---|---|---|---|
| (1) | I | III | IV | II |
| (2) | II | IV | III | I |
| (3) | II | IV | I | III |
| (4) | III | IV | II | I |

**105.** ಶೋಧನಾತ್ಮಕ ಕಲಿಕಾ ವಿಧಾನವು ವರ್ಗೀಕರಣಗೊಂಡಿರುವ ಕ್ಷೇತ್ರ

(1) ಜ್ಞಾನಾತ್ಮಕ ರಚನಾವಾದ

(2) ದೃಢನಂಬಿಕೆಯ ರಚನಾವಾದ

(3) ಸಾಮಾಜಿಕ ರಚನಾವಾದ

(4) ವೈಯಕ್ತಿಕ ರಚನಾವಾದ

**106.** ವೈಗಟ್ಸ್ಕಿಯವರ ಪ್ರಕಾರ ಕಾರ್ಯವೊಂದರ ಮೇಲೆ ಪ್ರಭುತ್ವ ಸಾಧಿಸಲು ವಿದ್ಯಾರ್ಥಿಗೆ ಬೆಂಬಲವನ್ನು ನೀಡಲಾಗುತ್ತದೆ. ನಂತರದಲ್ಲಿ ಬೆಂಬಲವನ್ನು ಹಿಂತೆಗೆದುಕೊಂಡಾಗಲೂ ವಿದ್ಯಾರ್ಥಿಯು ಮತ್ತೆ ಕಾರ್ಯವನ್ನು ಪೂರ್ಣಗೊಳಿಸುತ್ತಾನೆ. ಇದು ಪ್ರತಿನಿಧಿಸುವುದು

(1) ಸಹಾಯಕ ಅನುಪಾತೀಯ ವಲಯ

(2) ಸಹಾಯಕ ಪ್ರಾಮುಖ್ಯತಾ ವಲಯ

(3) ಸಹಾಯಕ ಕಲಿಕಾ ಸಾಮೀಪ್ಯ ವಲಯ

(4) ಸಹಾಯಕ ಶಾಶ್ವತ ವಲಯ



Scanned with CamScanner

107. 5E ಕಲಿಕಾ ಮಾದರಿಯಲ್ಲಿ ಕಲಿಯಲು ಪ್ರೇರೇಪಿಸುವ ಪ್ರಕ್ರಿಯೆಯನ್ನು ಒಳಗೊಂಡಿರುವ ಹಂತ
(1) ಅನ್ವೇಷಿಸುವಿಕೆ
(2) ತೊಡಗಿಸಿಕೊಳ್ಳುವಿಕೆ
(3) ವಿವರಿಸುವಿಕೆ
(4) ಮೌಲ್ಯಮಾಪಿಸುವಿಕೆ

108. ಒಂದು ಮಗು ತನಗೆ ನೀಡಿದ ವಸ್ತುವನ್ನು ತಾನು ಹೊಂದಿರುವ ಪೂರ್ವಜ್ಞಾನವನ್ನು ಬಳಸಿ ಮರು ಆಕಾರ ಅಥವಾ ಜೋಡಣೆ ಮಾಡುತ್ತದೆ. ಇಂತಹ ಮಗುವನ್ನು ಗುರ್ತಿಸುವ ರೀತಿ
(1) ಪ್ರತಿಭಾವಂತ ಮಗು
(2) ಮಂದಗತಿ ಕಲಿಕಾರ್ಥಿ
(3) ಸೃಜನಾತ್ಮಕತೆ ಹೊಂದಿರುವ ಮಗು
(4) ಶೈಕ್ಷಣಿಕವಾಗಿ ಹಿಂದುಳಿದ ಮಗು

109. ಗಣಿತೀಯ ಕಲನದಲ್ಲಿ ಸಮಸ್ಯೆಯನ್ನು ಹೊಂದಿರುವ ಮಗುವನ್ನು ಹೀಗೆಂದು ಕರೆಯುತ್ತಾರೆ
(1) ಡಿಸ್‌ಗ್ರಾಫಿಯಾ
(2) ಡಿಸ್‌ಕ್ಯಾಲ್‌ಕ್ಯುಲಿಯಾ
(3) ಡಿಸ್‌ನೋಮಿಯಾ
(4) ಡಿಸ್‌ಆರ್ಥ್ರಿಯಾ

110. ಈ ಕೆಳಕಂಡ ಆಧಾರದ ಮೇಲೆ ಕಲಿಕಾ ನ್ಯೂನತೆ ಹೊಂದಿರುವ ಮಗುವನ್ನು ಇತರ ಮಕ್ಕಳಿಂದ ಸ್ಪಷ್ಟವಾಗಿ ಬೇಧ ಮಾಡಲಾಗಿಲ್ಲ
(1) ಭೌತಿಕ ನೋಟ ಮತ್ತು ಮಾನಸಿಕ ಸಾಮರ್ಥ್ಯ
(2) ಬುದ್ಧ್ಯಾಂಕ ಮತ್ತು ಮಾನಸಿಕ ಸಾಮರ್ಥ್ಯ
(3) ಮಾನಸಿಕ ಸಾಮರ್ಥ್ಯ ಮತ್ತು ಶೈಕ್ಷಣಿಕ ಕ್ಷಮತೆ
(4) ಭೌತಿಕ ನೋಟ ಮತ್ತು ಬುದ್ಧ್ಯಾಂಕ (ಬುದ್ಧಿಶಕ್ತಿ ಸೂಚ್ಯಾಂಕ)

111. ಒಂದು ಶಾಲೆಯಲ್ಲಿ ಶಿಕ್ಷಕರನ್ನು ಸಮೃದ್ಧಿಗೊಳಿಸುವ ಕಾರ್ಯಕ್ರಮಗಳು ಇವುಗಳನ್ನು ಒಳಗೊಂಡಿಲ್ಲ
(1) ಸ್ವತಂತ್ರ ಯೋಜನಾ ಕಾರ್ಯದ ಮೇಲೆ ಕೆಲಸ ಮಾಡುವುದು
(2) ಪ್ರಯೋಗ ಪರೀಕ್ಷೆ
(3) ಸ್ವತಂತ್ರ ಸಂಶೋಧನೆ
(4) ಪರಿಹಾರಾತ್ಮಕ ನಿರ್ದೇಶನ

112. ಶಾಲೆಯಲ್ಲಿ ಒಬ್ಬ ವಿದ್ಯಾರ್ಥಿಯು ಸಾಮಾಜೀಕರಣಗೊಳ್ಳದ ಪ್ರತ್ಯೇಕಿತ ವರ್ತನೆಯನ್ನು ತೋರ್ಪಡಿಸುತ್ತಿದ್ದರೆ, ಆ ವಿದ್ಯಾರ್ಥಿಯ ಸ್ವಭಾವ
(1) ಅಂತರ್ಮುಖಿ
(2) ಬಹಿರ್ಮುಖಿ
(3) ಉಭಯಮುಖಿ
(4) ಸ್ಥಿರ



Scanned with CamScanner

113. ಐಸೆಂಕ್‌ರವರ ಪ್ರಕಾರ ವ್ಯಕ್ತಿತ್ವದ ನಾಲ್ಕು ಮೂಲಭೂತ ವಿಧಗಳು
(1) ಪಕ್ವತೆ, ಬುದ್ಧಿಶಕ್ತಿ, ವಿಶ್ವಾಸಾರ್ಹ, ಸ್ಥಿರ
(2) ರೂಢಿಗತ, ದೃಢವಾದ, ಅಸ್ಥಿರ, ನಿಖರ
(3) ಸ್ಥಿರ, ಅಸ್ಥಿರ, ಅಂತರ್ಮುಖಿ, ಬಹಿರ್ಮುಖಿ
(4) ಆತಂಕ, ಉನ್ಮಾದ, ಆಸಕ್ತಿ, ಧೈರ್ಯಶಾಲಿ

114. ಆವರ್ತಕ ರೀತಿಯಲ್ಲಿ ವಿದ್ಯಾರ್ಥಿಯನ್ನು ನಿರಂತರವಾಗಿ ಮೌಲ್ಯಮಾಪನ ಮಾಡುವುದು ನಿರಂತರ ಸಮಗ್ರ ಮೌಲ್ಯಮಾಪನದ ಒಂದು ಅಂಶವಾಗಿದೆ. ಇಲ್ಲಿ 'ನಿರಂತರ' ಒಳಗೊಂಡಿರುವುದು
(1) ಅಡಚಣೆ ಮತ್ತು ಕಾಲಮಿತಿ
(2) ಪ್ರಗತಿಪರ ಮತ್ತು ಸತತ
(3) ವಿಭಿನ್ನ ಮತ್ತು ಸಮಗ್ರ
(4) ನಿರಂತರ ಮತ್ತು ಆವರ್ತನ

115. 8ನೆಯ ತರಗತಿಯ ಮಗುವೊಂದು ಮಧ್ಯಮ ಮೇಲ್ದರ್ಜೆ ವರ್ಗದ ಭಾಷಾ ಪ್ರಸರಣದಲ್ಲಿ ಪಠ್ಯ ವಿಷಯವನ್ನು ಓದಲು ಕಷ್ಟ ಪಡುವುದನ್ನು ಶಿಕ್ಷಕರು ಗಮನಿಸಿದರು. ಇಲ್ಲಿ ಬೋಧನಾ-ಕಲಿಕಾ ಪ್ರಕ್ರಿಯೆಯ ದೌರ್ಬಲ್ಯವನ್ನು ಸಹಿಸಲು ನೆರವಾಗುವ ಮೌಲ್ಯಮಾಪನ ವಿಧಾನ
(1) ಸಂಕಲಿತ ಮೌಲ್ಯಮಾಪನ
(2) ರೂಪಣಾತ್ಮಕ ಮೌಲ್ಯಮಾಪನ
(3) ಆಂತರಿಕ ಮೌಲ್ಯಮಾಪನ
(4) ಬಾಹ್ಯ ಮೌಲ್ಯಮಾಪನ

116. ದತ್ತಾಂಶ ಸಂಗ್ರಹಿಸಿದ ನಂತರದ ಮೌಲ್ಯಮಾಪನ ಪ್ರಕ್ರಿಯೆ ಹೊಂದಿರುವ ಘಟಕಾಂಶಗಳು
(1) ಅರ್ಥೈಸುವಿಕೆ, ಸಂಶ್ಲೇಷಣೆ, ನಿರ್ಣಯ
(2) ಅರ್ಥೈಸುವಿಕೆ, ಮೌಲ್ಯ ನಿರ್ಣಯ, ಫಲಿತಾಂಶ
(3) ಅರ್ಥೈಸುವಿಕೆ, ಕಾಲರೇಖೆ, ಅನುಚಿಂತನೆ
(4) ಅರ್ಥೈಸುವಿಕೆ, ವಿಶ್ಲೇಷಣೆ, ಅನುಚಿಂತನೆ

117. ಪರೀಕ್ಷೆ ಮತ್ತು ಅವಲೋಕನದ ಮುಖಾಂತರ ದತ್ತಾಂಶವನ್ನು ಸಂಗ್ರಹಿಸಿ, ಮೌಲ್ಯ ನಿರ್ಣಯದೊಂದಿಗೆ ವರ್ತನೆಯ ವಿಶ್ಲೇಷಣೆಯನ್ನು ಮಾಡಿ ಗುರುತಿಸುವ ಪದ ಪ್ರಯೋಗ
(1) ಮೌಲ್ಯ ನಿರ್ಧಾರಣ
(2) ಮೌಲ್ಯೀಕರಣ
(3) ನಿರ್ಣಯ
(4) ನಿರ್ಧಾರ

118. ಶೈಕ್ಷಣಿಕ ಉದ್ದೇಶದ ವರ್ಗೀಕರಣದಲ್ಲಿ ಕಲಿಕಾವರ್ತನ ರೂಪ 'ಹೋಲಿಕೆ'ಗೆ ಸಂಬಂಧಿಸಿದ್ದು
(1) ಸ್ಮರಿಸುವಿಕೆ
(2) ಅರ್ಥೈಸುವಿಕೆ
(3) ಅನ್ವಯಿಸುವಿಕೆ
(4) ವಿಶ್ಲೇಷಿಸುವಿಕೆ

119. ಶಾಲಾ ಕಾರ್ಯಕ್ರಮದ ಬಗ್ಗೆ ವಿದ್ಯಾರ್ಥಿಗಳ ಮನೋಭಾವವನ್ನು ಮಾಪನ ಮಾಡಲು ಶಿಕ್ಷಕರು ಬಳಸುವ ಸಾಮಾನ್ಯ ತಂತ್ರ
(1) ಪ್ರಕ್ಷೇಪಣಾ ತಂತ್ರ
(2) ದೋಷ-ಆಯ್ಕೆ ತಂತ್ರ
(3) ಪರೋಪ ಅವಲೋಕನಾ ತಂತ್ರ
(4) ಸ್ವವರದಿ ಪ್ರಶ್ನಾವಳಿ



Scanned with CamScanner

120. ಉತ್ತಮ ವಾರ್ಷಿಕ ಸಾಧನಾ ಪರೀಕ್ಷೆಯನ್ನು ಸಿದ್ಧಪಡಿಸಲು ಅನುಸರಿಸಬೇಕಾದ ಕ್ರಮ

A. ಪರೀಕ್ಷೆಯಲ್ಲಿ ನೀಡಲಾದ ಕ್ಲಿಷ್ಟತೆಯ ಮಟ್ಟದ ಪ್ರಾಮುಖ್ಯತೆಯನ್ನು ನಿರ್ಧರಿಸುವುದು.

B. ಪರೀಕ್ಷಿಸಬಹುದಾದ ವಿವಿಧ ಉದ್ದೇಶಗಳ ಪ್ರಾಮುಖ್ಯತೆಯನ್ನು ನಿರ್ಧರಿಸುವುದು.

C. ವಿವಿಧ ರೀತಿಯ ಪ್ರಶ್ನೆಗಳ ಪ್ರಾಮುಖ್ಯತೆಯನ್ನು ನಿರ್ಧರಿಸುವುದು.

D. ವಿವಿಧ ರೀತಿಯ ಪ್ರಶ್ನೆಗಳ ಕಾಲ ಮತ್ತು ಅಂಕಗಳ ಪ್ರಾಮುಖ್ಯತೆಯನ್ನು ನಿರ್ಧರಿಸುವುದು.

| | | | | |
|---|---|---|---|---|
| (1) | A | B | C | D |
| (2) | B | C | D | A |
| (3) | C | B | D | A |
| (4) | C | B | A | D |

121. ನಿಗದಿತ ಸಮಯದಲ್ಲಿ ನೇಮಿತ ಕಾರ್ಯವನ್ನು ಸಲ್ಲಿಸಿದ ವಿದ್ಯಾರ್ಥಿಯನ್ನು ತರಗತಿಯ ಶಿಕ್ಷಕರು ಶ್ಲಾಘಿಸಿದರು. ಶಿಕ್ಷಕರು ಬಳಸಿದ ನಿಯಮವು

(1) ಪುನರಾವರ್ತನೆ ಮತ್ತು ಅಭ್ಯಾಸ

(2) ಹಿಮ್ಮಾಹಿತಿ ಮತ್ತು ಪುನರ್ಬಲನ

(3) ಸೃಜನಾತ್ಮಕತೆಯನ್ನು ಬೆಂಬಲಿಸುವುದು

(4) ಇಂದ್ರಿಯಗಳಿಗೆ ತರಬೇತಿ ನೀಡುವುದು

122. ಈ ಕೆಳಗೆ ನೀಡಿರುವ ಆಯ್ಕೆಗಳಲ್ಲಿ ಸೂಕ್ತವಾದ ಬೋಧನಾ ಕ್ರಮ (Maxims of teaching) ದ ಆಯ್ಕೆಯು

(1) ಮೂರ್ತದಿಂದ ಅಮೂರ್ತದವರೆಗೆ

(2) ತಾರ್ಕಿಕದಿಂದ ಮನೋವೈಜ್ಞಾನಿಕದವರೆಗೆ

(3) ಅನುಗಮನಾತ್ಮಕದಿಂದ ನಿಗಮನಾತ್ಮಕದವರೆಗೆ

(4) ವಾಸ್ತವದಿಂದ ಪ್ರತಿನಿಧಿಸುವುದರವರೆಗೆ

123. ಸಹಭಾಗಿತ್ವ ಕಲಿಕೆಯು ಅಭಿವೃದ್ಧಿಪಡಿಸುವ ಕೌಶಲದ ಘಟಕ

(1) ಶೈಕ್ಷಣಿಕ ಕೌಶಲ್ಯ ಮಾತ್ರ

(2) ಸಾಮಾಜಿಕ ಕೌಶಲ್ಯ ಮಾತ್ರ

(3) ಶೈಕ್ಷಣಿಕ ಮತ್ತು ಸಾಮಾಜಿಕ ಕೌಶಲ್ಯ

(4) ಕೈಚಳಕ ಕೌಶಲ್ಯ ಮಾತ್ರ

124. ಅನುಗಮನ ವಿಧಾನವು ಒಳಗೊಂಡಿರುವ ತತ್ವಗಳು

(1) ಉದಾಹರಣೆಯಿಂದ ನಿಯಮದವರೆಗೆ

(2) ಅಮೂರ್ತದಿಂದ ವಾಸ್ತವಿಕದೆಡೆಗೆ

(3) ಸಂಕೀರ್ಣತೆಯಿಂದ (ಕ್ಲಿಷ್ಟತೆ) ಸರಳತೆಯ ಕಡೆಗೆ

(4) ಸಾಮಾನ್ಯೀಕರಣದಿಂದ ನಿರ್ದಿಷ್ಟದ ಕಡೆಗೆ

125. ಸಮೂಹದಲ್ಲಿ ಕಾರ್ಯನಿರ್ವಹಿಸುತ್ತಿರುವ ತರಗತಿಯ ವಿದ್ಯಾರ್ಥಿಗಳನ್ನು ನಿಯಂತ್ರಿಸುವ ತಂತ್ರ

(1) ಸಹಭಾಗಿತ್ವ ಕಲಿಕೆ

(2) ಸಹಕಾರ ಕಲಿಕೆ

(3) ಸಮೂಹ ಕಲಿಕೆ

(4) ಸ್ಪರ್ಧಾತ್ಮಕ ಕಲಿಕೆ



Scanned with CamScanner

## ಆರೋಗ್ಯ ಮತ್ತು ಮೌಲ್ಯ ಶಿಕ್ಷಣ

**126.** ಟೈಫ್ಲಾಯಿಡ್, ಕಾಲರಾ ಮತ್ತು ಟ್ಯೂಬರ್‌ಕ್ಯುಲೋಸಿಸ್ ಕಾಯಿಲೆಗಳಿಗೆ ಕಾರಣವಾಗುವ ಸೂಕ್ಷ್ಮಾಣು ಜೀವಿ

(1) ವೈರಸ್
(2) ಬ್ಯಾಕ್ಟೀರಿಯಾ
(3) ಫಂಗೈ
(4) ಪ್ರೋಟೋಜೋವಾ

**127.** ಜೀವಕೋಶಗಳ ಸಂಖ್ಯೆಯಲ್ಲಿನ ಹೆಚ್ಚಳದ ಮೂಲಕ ಗಾತ್ರದಲ್ಲಿ ಪರಿಮಾಣಾತ್ಮಕ ಹೆಚ್ಚಳದ ಪ್ರಕ್ರಿಯೆ

(1) ವಿಕಾಸ
(2) ಬೆಳವಣಿಗೆ
(3) ಪ್ರೌಢತೆ
(4) ಭಿನ್ನತೆ

**128.** HIV ಯು ಇದರ ಮೂಲಕ ಹರಡುವುದಿಲ್ಲ

(1) HIV ಪೀಡಿತ ತಾಯಿಯಿಂದ ಭ್ರೂಣಕ್ಕೆ
(2) HIV ಪೀಡಿತ ವ್ಯಕ್ತಿಯ ರಕ್ತದ ವರ್ಗಾವಣೆಯಿಂದ
(3) ಸೊಳ್ಳೆ ಅಥವಾ ಪ್ರಾಣಿಯ ಕಚ್ಚುವಿಕೆಯಿಂದ
(4) ಅಸುರಕ್ಷಿತ ಲೈಂಗಿಕ ಸಂಪರ್ಕದಿಂದ

**129.** ಪ್ರಥಮ ಚಿಕಿತ್ಸೆ ಎಂದರೆ

(1) ಆಕಸ್ಮಿಕ ಚಿಕಿತ್ಸೆ
(2) ಪೂರ್ವಭಾವಿ ಚಿಕಿತ್ಸೆ
(3) ದೀರ್ಘಾವಧಿ ಚಿಕಿತ್ಸೆ
(4) ವೈದ್ಯರು ಸಲಹೆ ನೀಡಿದ ನಂತರ ಒದಗಿಸುವ ಚಿಕಿತ್ಸೆ

**130.** ನೀರಿನಲ್ಲಿ ಕರಗುವ ಜೀವಸತ್ವ

(1) ಜೀವಸತ್ವ A
(2) ಜೀವಸತ್ವ B
(3) ಜೀವಸತ್ವ D
(4) ಜೀವಸತ್ವ E

**131.** ಇನ್‌ಫ್ಲುಯೆಂಜಾ ಖಾಯಿಲೆಗೆ ಕಾರಣವಾಗುವ ಸೂಕ್ಷ್ಮಾಣು ಜೀವಿ

(1) ವೈರಸ್
(2) ಬ್ಯಾಕ್ಟೀರಿಯಾ
(3) ಫ಼ಂಗಸ್
(4) ಪ್ರೋಟೋಝೋವಾ

**132.** ಡಯಾಬಿಟೀಸ್ ಮೆಲಿಟಸ್ ನ್ಯೂನತೆ ಉಂಟಾಗುವ ಭಾಗ

(1) ಯಕೃತ್ತು
(2) ಮೂತ್ರಪಿಂಡ
(3) ಮೇದೋಜೀರಕ ಗ್ರಂಥಿ
(4) ಗುಲ್ಮ (ಸ್ಪ್ಲೀನ್)



Scanned with CamScanner

133. ಪ್ಲಾಸ್ಮೋಡಿಯಂ ದ್ವಿಗುಣಗೊಳ್ಳುವ ಸ್ಥಳ
(1) ಮಾನವನ ದೇಹ
(2) ಗಟಾರ
(3) ನಿಂತ ನೀರು
(4) ಸೊಳ್ಳೆಯ ದೇಹ

134. ಮಾನವ ಜೀವನದ ನೈತಿಕ ತತ್ವದಲ್ಲಿ ಉನ್ನತ ಮಟ್ಟದ ಉತ್ತಮ ನೈತಿಕ ಮಟ್ಟವನ್ನು ಸೂಚಿಸುವುದು
(1) ಧನಾತ್ಮಕತಾವಾದ
(2) ಆಶಾವಾದ
(3) ಭೋಗವಾದ
(4) ನಿರಾಶಾವಾದ

135. ಉಪಯೋಗಾರ್ಹತಾವಾದದ ಪ್ರಕಾರ ಶಿಕ್ಷೆಯು ಪ್ರತಿನಿಧಿಸದಿರುವುದು
(1) ಪಾಠ ಬೋಧನೆ
(2) ದಂಡ ಪಾವತಿಸುವುದು
(3) ಪ್ರಜಾ ರಕ್ಷಣೆ
(4) ಒಂದೇ ರೀತಿಯ ತಪ್ಪನ್ನು ಮಾಡದಿರುವಂತೆ ಪ್ರಜೆಗಳನ್ನು ನಿರ್ಬಂಧಿಸುವುದು

136. ಜ್ಞಾನ ಮತ್ತು ನೈತಿಕ ಲಕ್ಷಣಗಳು ಇದರ ಸಾಧನ
(1) ನೈತಿಕ ಬಹುಸಾಂಸ್ಕೃತಿಕತೆ
(2) ಆತ್ಮ ಸಾಕ್ಷಾತ್ಕಾರ
(3) ಟೀಕಾ ಕಾರ್ಯ
(4) ನೈತಿಕ ಸ್ವಾಭಾವಿಕತೆ

137. ಇದರ ಪ್ರಕಾರ ಸಂತೋಷ ಮತ್ತು ಖುಷಿಪಡುವುದು ಆಂತರಿಕವಾಗಿ ಒಳ್ಳೆಯದು
(1) ಭೋಗವಾದ
(2) ಬಹುಸಾಂಸ್ಕೃತಿಕವಾದ
(3) ನಿರಾಶಾವಾದ
(4) ರೋಗಶಾಸ್ತ್ರವಾದ

138. ಭಾರತೀಯ ತತ್ವಶಾಸ್ತ್ರದ ಸಾಂಪ್ರದಾಯಿಕ ಶಾಲೆ
(1) ಚಾರ್ವಾಕ
(2) ವೇದಾಂತ
(3) ಬೌದ್ಧೀಯ
(4) ಜೈನೀಯ

139. ನೈತಿಕ ಸಂಹಿತೆಯನ್ನು ಸ್ವ–ಇಚ್ಛೆಯಿಂದ ಮತ್ತು ತೃಪ್ತಿದಾಯಕವಾಗಿ ಅನುಸರಿಸುವ ಪ್ರವೃತ್ತಿ
(1) ಸ್ವಾಭಾವಿಕತೆ
(2) ಅಹಂ–ಬಲ
(3) ಉನ್ನತ ಮಟ್ಟದ ಅಹಂ ಬಲ
(4) ನೈತಿಕ ಸ್ಥಿರತೆ

140. ಯೋಗ ಕ್ರಿಯೆಯಲ್ಲಿ "ಉಸಿರನ್ನು ಹೊರತೆಗೆ" ಎಂದರೆ
(1) ಪೂರಕ
(2) ರೇಚಕ
(3) ಕುಂಬಕ
(4) ಶೂನ್ಯಕ




Scanned with CamScanner

## ಕಂಪ್ಯೂಟರ್ ಸಾಕ್ಷರತೆ

**141.** ರೋಬೋಟಿಕ್ ತಂತ್ರಜ್ಞಾನವು ಅನ್ವಯತೆಯನ್ನು ಕಂಡುಕೊಂಡಿರುವ ಗಣಕಯಂತ್ರದ ಪೀಳಿಗೆ
(1) ಎರಡನೇ (2) ಮೂರನೇ (3) ನಾಲ್ಕನೇ (4) ಐದನೇ

**142.** ಮೊಬೈಲ್‌ಗಳಲ್ಲಿ ಬಳಸುವ ಆಂಡ್ರಾಯ್ಡ್ ಆಪರೇಟಿಂಗ್ ಸಿಸ್ಟಂ, ಈ ಕೆಳಗಿನ ಗಣಕಯಂತ್ರ ಭಾಷೆಯಿಂದ ರಚಿತವಾಗಿದೆ
(1) ಲಿನೆಕ್ಸ್ (2) C (3) C++ (4) FORTRAN

**143.** ಪರಂ ಶಕ್ತಿ, ಪರಂ ಶಿವಾಯ್ ಮತ್ತು ಪರಂ ಬ್ರಹ್ಮ, ಇವುಗಳು
(1) ಭಾರತೀಯ ರಾಕೆಟ್ ಉಡಾವಣೆಯ ಗಣಕೀಕೃತ ತಂತ್ರಾಂಶಗಳು
(2) ಭಾರತೀಯ ಸೂಪರ್ ಕಂಪ್ಯೂಟರ್‌ಗಳು
(3) ಭಾರತೀಯ ಪುರಾಣಕಥೆಗಳ ದತ್ತಾಂಶ ಸಂಗ್ರಹಗಳು
(4) ಭಾರತೀಯ ಮಾರುಕಟ್ಟೆ ವ್ಯವಹಾರಗಳ ತಂತ್ರಾಂಶಗಳು

**144.** 'EDI' ನ ವಿಸ್ತರಿತ ರೂಪ
(1) Electric Data Interchange (2) Electronic Data Interchange
(3) Electric Document Interchange (4) Electronic Document Interchange

**145.** ಒಂದು ಗೂಗಲ್ ಡ್ರೈವ್‌ನ ಒಟ್ಟು ಸಂಗ್ರಹಣಾ ಸಾಮರ್ಥ್ಯ
(1) 10 MB (2) 10 GB (3) 15 MB (4) 15 GB

**146.** '1' ನಿಬ್ಬಲ್ ಎಂದರೆ
(1) 4 ಬಿಟ್‌ಗಳು (2) 8 ಬಿಟ್‌ಗಳು (3) 1 ಬಿಟ್ (4) 1 ಬೈಟ್

**147.** ಇವುಗಳಲ್ಲಿ ಬೆಳಕಿನ ತತ್ವದ ಆಧಾರದ ಮೇಲೆ ಮಾಹಿತಿಯನ್ನು ಓದುವ ಸಾಧನ
(1) ಜಾಯ್‌ಸ್ಟಿಕ್ (2) ಸ್ಕ್ಯಾನರ್ (3) ಸ್ಪೀಕರ್ (4) ಪ್ರಿಂಟರ್

**148.** ಇವುಗಳಲ್ಲಿ ಸರ್ಚ್ ಇಂಜಿನ್ ಅಲ್ಲದ್ದು
(1) LINUX (2) Opera (3) Mozilla (4) Chrome

**149.** ಕನ್ನಡ ಪದ 'ಸಾರ್ವಜನಿಕ'ವನ್ನು ನುಡಿ ಏಕಭಾಷೆಯಲ್ಲಿ ಈ ಕೆಳಗಿನ ಒಂದರಂತೆ ಟೈಪಿಸಬಹುದು
(1) savfjniK (2) sAvFjniK
(3) SaarvajaniKa (4) SArfvajniK

sAvF

**150.** ವರ್ಡ್ ಪ್ರೊಸೆಸರ್‌ನಲ್ಲಿ 'ಹೊಸ ಡಾಕ್ಯುಮೆಂಟ್' ಅನ್ನು ತೆರೆಯಲು ಬಳಸುವ ಶಾರ್ಟ್‌ಕಟ್ ಕೀಲಿ ಸಂಯೋಜನೆ
(1) Ctrl + O (2) Ctrl + W (3) Ctrl + C (4) Ctrl + N



Scanned with CamScanner